**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.264/2019**

(ಚಾ.ಸಾ.24/ಪ್ರಾ.ಸಾ.11)

ತಾಃ 29.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ವೆಂಕಟೇಗೌಡ |
| ತಂದೆಯ ಹೆಸರು | ಬ್ಯಾಟಪ್ಪ |
| ವಯಸ್ಸು | 45 ವರ್ಷ |
| ಉದ್ಯೋಗ | ಆರಕ್ಷಕ ನಿರೀಕ್ಷಕರು, ಸಿಐಡಿ ಘಟಕ, ಬೆಂಗಳೂರು |
| ವಾಸ ಸ್ಥಳ | ಬೆಂಗಳೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಸೋಲದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ಆರಕ್ಷಕ ನಿರೀಕ್ಷಕರಾಗಿ ದಿಃ05.06.2017 ರಿಂದ ದಿಃ17.07.2019 ರವರೆಗೆ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ24.12.2018 ರಂದು ಸಂಜೆ 5.00 ಗಂಟೆಗೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಸ್ಥಳದಲ್ಲಿ ಹಾಜರಿದ್ದ ಪಿರ್ಯಾದಿಯ ಹೇಳಿಕೆ ದೂರನ್ನು ಪಡೆದು ನಮ್ಮ ಠಾಣಾ ಮೊಕದ್ದಮೆ ಸಂಖ್ಯೆ 381/2018 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವ ಅನ್ನು ನ್ಯಾಯಾಲಯಕ್ಕೆ ನಿವೇಧಿಸಿಕೊಂಡಿರುತ್ತೇನೆ. ದೂರಿನಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು, ಪ್ರ.ವ.ವ ಅನ್ನು ನಿ.ಪಿ.8 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು.

ನಂತರ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ಚಾಸಾ.7 ಮತ್ತು 8 ರವರ ಸಮಕ್ಷಮ ಸಂಜೆ 5.30 ರಿಂದ 6.30 ರವರೆಗೆ ನಿ.ಪಿ.2 ರಂತೆ ಪಂಚನಾಮೆ ಮಾಡಿರುತ್ತೇನೆ. ಪಂಚನಾಮಾ ಕಾಲಕ್ಕೆ ಕೃತ್ಯ ನಡೆದ ಸ್ಥಳದಲ್ಲಿ ರಕ್ತದ ಕಲೆ ಬಿದ್ದಿದ್ದು ಸದರಿ ರಕ್ತದ ಕಲೆಯನ್ನು ಮತ್ತು ರಕ್ತದ ಕಲೆಯಾಗಿದ್ದ ಒಂದು ಅರ್ಧ ಸೇದಿರುವ ಸಿಗರೇಟ್ ತುಂಡನ್ನು ರಕ್ತದ ಕಲೆಯನ್ನು ಮಾದರಿಯ ಕಾಟನ್ ನಲ್ಲಿ ಸಂಗ್ರಹಿಸಿ ಒಂದು ಪ್ಲಾಸ್ಟಿಕ್ ಡಬ್ಬದಲ್ಲಿ ಹಾಕಿ ಡಿಡಿ ಎಂಬ ಸೀಲ್ ನಿಂದ ಮೊಹರು ಮಾಡಿ ಪಂಚರು ಮತ್ತು ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿ ಪಂಚನಾಮಾ ಕ್ರಮ ಜರುಗಿಸಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿ.ಪಿ.2(ಡಿ) ಎಂದು ಗುರುತಿಸಲಾಯಿತು. ಆ ದಿನ ಜಪ್ತಿಪಡಿಸಿದ ಮಾಲುಗಳನ್ನು ಮಾಲುಪಟ್ಟಿ ಸಂಖ್ಯೆ 173/2018 ರಲ್ಲಿ ಅಳವಡಿಸಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನಿ.ಪಿ.9 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಒಟ್ಟಾಗಿ ಮು.ಮಾ.1 ಎಂದು ಗುರುತಿಸಲಾಗಿದೆ.

2. ಅದೇ ದಿನ ಚಾಸಾ.3 ರಿಂದ 8 ಮತ್ತು 15 ರಿಂದ 17 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿ ಪತ್ತೆ ಬಗ್ಗೆ ಚಾಸಾ.19 ಹಾಗೂ ಅವರ ಸಿಬ್ಬಂಧಿಗಳನ್ನು ನೇಮಕ ಮಾಡಿರುತ್ತೇನೆ. ದಿಃ25.12.2018 ರಂದು ಮಧ್ಯಾಹ್ನ 3.00 ಗಂಟೆಗೆ ಚಾಸಾ.19 ಹಾಗೂ ಅವರ ಸಿಬ್ಬಂಧಿಗಳು ಆರೋಪಿಯನ್ನು ಪತ್ತೆ ಮಾಡಿ ವರದಿಯೊಂದಿಗೆ ಹಾಗೂ ಆರೋಪಿ ಕೃತ್ಯಕ್ಕೆ ಉಪಯೋಗಿಸಿದ ದ್ವಿಚಕ್ರ ವಾಹನ ಸಂಖ್ಯೆ ಕೆಎ-04/ಜೆಎಲ್-0933 ವಾಹನವನ್ನು ನನ್ನ ಮುಂದೆ ಹಾಜರುಪಡಿಸಿದ ಮೇರೆಗೆ ಆರೋಪಿಯನ್ನು ದಸ್ತಗಿರಿ ಕ್ರಮ ಜರುಗಿಸಿ, ಆತನನ್ನು ವಿಚಾರೆ ಮಾಡಿ ಆತನ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ನನ್ನ ಜೊತೆ ಬಂದರೆ ನಾನು ಯಶವಂತಪುರದಲ್ಲಿ ರೇಜರ್ ಖರೀದಿಸಿದ ಅಂಗಡಿಯನ್ನು…………………… ಡಿಯೋ ಗಾಡಿ ಡಿಕ್ಕಿಯಲ್ಲಿ ಇದ್ದು ಬಟ್ಟೆಯನ್ನು ತೆಗೆದು

ಹಾಜರುಪಡಿಸುತ್ತೇನೆ ಎಂದು ಹೇಳಿಕೆ ನೀಡಿದ್ದು ಸದರಿ ಹೇಳಿಕೆಯ ಭಾಗವನ್ನು ನಿ.ಪಿ.10 ಎಂದು ಗುರುತಿಸಲಾಯಿತು. ಸದರಿ ಹೇಳಿಕೆಗೆ ಆರೋಪಿಯು ಸಹಿ ಮತ್ತು ಎಡ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ಆರೋಪಿಯ ಸಹಿಯನ್ನು ನಿ.ಪಿ.10(ಎ) ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.10(ಬಿ) ಎಂದು ಗುರುತಿಸಲಾಯಿತು.

3. ಆರೋಪಿಯ ಸ್ವಇಚ್ಛಾ ಹೇಳಿಕೆಯ ಆಧಾರದ ಮೇಲೆ ಕೃತ್ಯಕ್ಕೆ ಉಪಯೋಗಿಸಿದ ದ್ವಿಚಕ್ರ ವಾಹನ ಸಂಖ್ಯೆ ಕೆಎ-04/ಜೆಎಲ್-0933 ಮತ್ತು ಹಾಜರುಪಡಿಸಿದ ಬಟ್ಟೆಯನ್ನು ಅಮಾನತ್ತುಪಡಿಸಿಕೊಳ್ಳಲು ಚಾಸಾ.9 ಮತ್ತು 10 ರವರಿಗೆ ನೊಟೀಸ್ ನೀಡಿ ಠಾಣೆಗೆ ಬರಮಾಡಿಕೊಂಡು ಅವರ ಸಮಕ್ಷಮದಲ್ಲಿ ಆರೋಪಿಯು ಕೃತ್ಯಕ್ಕೆ ಬಳಸಿದ ದ್ವಿಚಕ್ರ ವಾಹನ ಇದೆ ಎಂದು ತೋರಿಸಿದ ಮೇರೆಗೆ ಮತ್ತು ಕೃತ್ಯದ ಸಮಯದಲ್ಲಿ ಆತನು ಧರಿಸಿದ್ದ ಬಟ್ಟೆ ಎಂದು ಡಿಯೋ ಗಾಡಿ ಡಿಕ್ಕಿಯಿಂದ ತೆಗೆದು ಹಾಜರುಪಡಿಸಿದ ಮೇರೆಗೆ ನೋಡಲಾಗಿ ಆ ಬಟ್ಟೆಗಳು ಬಿಳಿ ಮತ್ತು ಕಪ್ಪು ಬಣ್ಣದ ಟಿ ಶರ್ಟ್, ಕಪ್ಪು ಬಣ್ಣದ ಕಾಟನ್ ಜೀನ್ಸ್ ಫ್ಯಾಂಟ್ ಆಗಿದ್ದು ಆ ಬಟ್ಟೆಗಳು ರಕ್ತಸಿಕ್ತವಾಗಿದ್ದವು. ಸದರಿ ಬಟ್ಟೆಗಳನ್ನು ಮತ್ತು ದ್ವಿಚಕ್ರ ವಾಹನವನ್ನು ಪಂಚರ ಸಮಕ್ಷಮ ಜಪ್ತಿಪಡಿಸಿ ಬಟ್ಟೆಗಳನ್ನು ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಡಿಡಿ ಎಂಬ ಸೀಲ್ ನಿಂದ ಮೊಹರು ಮಾಡಿ ಪಂಚರು ಮತ್ತು ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿ ಪಂಚನಾಮಾ ಕ್ರಮ ಜರುಗಿಸಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿ.ಪಿ.4(ಬಿ) ಎಂದು ಗುರುತಿಸಲಾಯಿತು. ಆ ದಿನ ಜಪ್ತಿಪಡಿಸಿದ ಮಾಲುಗಳನ್ನು ಮಾಲುಪಟ್ಟಿ ಸಂಖ್ಯೆ 174/2018 ರಲ್ಲಿ ಅಳವಡಿಸಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನಿ.ಪಿ.11 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.11(ಎ) ಎಂದು ಗುರುತಿಸಲಾಯಿತು. ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ.8 ಮತ್ತು 9 ಎಂದು ಗುರುತಿಸಲಾಗಿದೆ. ನಂತರ ಚಾಸಾ.9 ಮತ್ತು 10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಚಾಸಾ.1, 15 ರಿಂದ 17 ರವರನ್ನು ಠಾಣೆಗೆ

ಕರೆಸಿ ಅವರು ಆರೋಪಿಯನ್ನು ಗುರುತಿಸಿ ಮರು ಹೇಳಿಕೆ ನೀಡಿರುತ್ತಾರೆ. ಅದೇ ದಿನ ಚಾಸಾ.20 ರಿಂದ 23 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ.19 ರವರು ಸಲ್ಲಿಸಿದ ವರದಿಯನ್ನು ನೋಡುತ್ತಿದ್ದು ಅದನ್ನು ನಿ.ಪಿ.12 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.12(ಎ) ಎಂದು ಗುರುತಿಸಲಾಯಿತು.

4. ದಿಃ26.12.2018 ರಂದು ಆರೋಪಿಯು ಕೃತ್ಯ ನಡೆದ ಸ್ಥಳ ಮತ್ತು ಕೃತ್ಯಕ್ಕೆ ಉಪಯೋಗಿಸಿದ ರೇಜರ್ ಅನ್ನು ತೋರಿಸುವುದಾಗಿ ಸ್ವಇಚ್ಛಾ ಹೇಳಿಕೆ ನೀಡಿದ ಮೇರೆಗೆ ಚಾಸಾ.11 ಮತ್ತು 12 ರವರನ್ನು ನೋಟೀಸ್ ನೀಡಿ ಠಾಣೆಗೆ ಬರಮಾಡಿಕೊಂಡು ಅವರ ಸಮಕ್ಷಮದಲ್ಲಿ ಆರೋಪಿಯು ಕೃತ್ಯ ಎಸಗಿದ ಸ್ಥಳವನ್ನು ತೋರಿಸಿದ್ದು ಪರಿಶೀಲಿಸಲಾಗಿ ಸದರಿ ಮನೆಯು ವಿನಾಯಕ ಲೇಔಟ್, ಮನೆ ನಂಬರ್ 2/1 ರ ಮುಂದೆ ಇದ್ದು ಸದರಿ ಮನೆಯ ಅಡುಗೆ ಮನೆ, ಹಾಲ್ ಹಾಗೂ ಮನೆಯ ಮುಂದಿನ ಗೇಟ್ ನ ಬಳಿ ರಕ್ತದ ಕಲೆಗಳು ಇದ್ದು ನಂತರ ಆರೋಪಿ ಸ್ವಲ್ಪ ದೂರ ಮುಂದೆ ಕರೆದುಕೊಂಡು ಹೋಗಿ ರಸ್ತೆಯ ಪಕ್ಕದಲ್ಲಿ ಇದ್ದ ಬಿದಿರಿನ ಪೊದೆಯ ಹತ್ತಿರ ಒಂದು ರೇಜರ್ ಅನ್ನು ತೋರಿಸಿದ್ದು ಅದನ್ನು ಪರಿಶೀಲಿಸಲಾಗಿ ಅದರಲ್ಲಿ ರಕ್ತದ ಕಲೆ ಇದ್ದು ಸುಮಾರು 9 ವರೆ ಇಂಚು ಉದ್ದ ಇದ್ದು, ಅದರ ಮೇಲೆ Balsons Shaver ಎಂದು ಇದ್ದು ಸದರಿ ರೇಜರ್ ಅನ್ನು ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಡಿಡಿ ಎಂಬ ಸೀಲ್ ನಿಂದ ಮೊಹರು ಮಾಡಿ ಪಂಚರು ಮತ್ತು ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿ ಪಂಚನಾಮಾ ಕ್ರಮ ಜರುಗಿಸಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿ.ಪಿ.5(ಬಿ) ಎಂದು ಗುರುತಿಸಲಾಯಿತು. ಆ ದಿನ ಜಪ್ತಿಪಡಿಸಿದ ರೇಜರ್ ಅನ್ನು ಮಾಲುಪಟ್ಟಿ ಸಂಖ್ಯೆ 175/2018 ರಲ್ಲಿ ಅಳವಡಿಸಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನಿ.ಪಿ.13 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.13(ಎ) ಎಂದು ಗುರುತಿಸಲಾಯಿತು. ರೇಜರ್ ಅನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾ.3 ಎಂದು ಗುರುತಿಸಲಾಗಿದೆ. ನಂತರ ಚಾಸಾ.11 ಮತ್ತು 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

5. ನಂತರ ಆರೋಪಿಯು ಬಂಡಪ್ಪ ಗಾರ್ಡನ್ ನಲ್ಲಿ ಇರುವ ತನ್ನ ಮನೆಯ ನಂಬರ್ 136 ರ ಬಳಿ ಕರೆದುಕೊಂಡು ಹೋಗಿ ಚಾಸಾ.2 ರವರಿಂದ ಕಿತ್ತುಕೊಂಡಿದ್ದ ಚಿನ್ನದ ಚೈನ್ ಅನ್ನು ಹಾಜರುಪಡಿಸುವುದಾಗಿ ಹೇಳಿಕೆ ನೀಡಿದ ಮೇರೆಗೆ ಚಾಸಾ.13 ಮತ್ತು 14 ರವರನ್ನು ನೋಟೀಸ್ ನೀಡಿ ಠಾಣೆಗೆ ಬರಮಾಡಿಕೊಂಡು ಅವರ ಸಮಕ್ಷಮದಲ್ಲಿ ಆರೋಪಿಯು ತನ್ನ ಮನೆಯೊಳಗೆ ಕರೆದುಕೊಂಡು ಹೋಗಿ ಬೀರೂವಿನ ಮೇಲೆ ಒಂದು ಪೇಪರ್ ನಲ್ಲಿ ಸುತ್ತಿ ಇಟ್ಟಿದ್ದ ಮಾಂಗಲ್ಯ ಸರದ ತುಂಡನ್ನು ತೆಗೆದು ಹಾಜರುಪಡಿಸಿದ್ದು ಅದನ್ನು ಪಂಚರ ಸಮಕ್ಷಮ ನಿ.ಪಿ.6 ರಂತೆ ಮಧ್ಯಾಹ್ನ 11.30 ರಿಂದ 12.30 ರ ಸಮಯದಲ್ಲಿ ಪಂಚನಾಮೆ ಮಾಡಿ ಜಪ್ತಿಪಡಿಸಿರುತ್ತೇನೆ. ಪಂಚನಾಮೆಯಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.6(ಸಿ) ಎಂದು ಗುರುತಿಸಲಾಯಿತು. ನಿ.ಪಿ.6 ರಲ್ಲಿ ಪಂಚನಾಮಾ ಸಮಯವು ತಪ್ಪಾಗಿ ಬೆಳಿಗ್ಗೆ 8.30 ರಿಂದ 10.00 ಗಂಟೆ ಎಂದು ನಮೂದಾಗಿರುತ್ತದೆ. ಆ ದಿನ ಜಪ್ತಿಪಡಿಸಿದ ಚಿನ್ನದ ಚೈನ್ ಅನ್ನು ಮಾಲುಪಟ್ಟಿ ಸಂಖ್ಯೆ 176/2018 ರಲ್ಲಿ ಅಳವಡಿಸಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನಿ.ಪಿ.14 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.14(ಎ) ಎಂದು ಗುರುತಿಸಲಾಯಿತು. ಚಿನ್ನದ ಚೈನ್ ಅನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾ.7 ಎಂದು ಗುರುತಿಸಲಾಗಿದೆ. ನಂತರ ಚಾಸಾ.13 ಮತ್ತು 14 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ.23 ರವರಿಂದ ಗಾಯಾಳುವಿನಿಂದ ಸಂಗ್ರಹಿಸಿ ಕೊಟ್ಟ 3 ಬಟ್ಟೆಗಳನ್ನು ಸೀಲು ಮಾಡಿದ ಕವರ್ ನೊಂದಿಗೆ ತಂದು ಹಾಜರುಪಡಿಸಿ ವರದಿ ನೀಡಿದ ಮೇರೆಗೆ ಸದರಿ ಬಟ್ಟೆಗಳನ್ನು ಮಾಲುಪಟ್ಟಿ ಸಂಖ್ಯೆ 177/2018 ರಲ್ಲಿ ಅಳವಡಿಸಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನಿ.ಪಿ.15 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.15(ಎ) ಎಂದು ಗುರುತಿಸಲಾಯಿತು. ಆ ಬಟ್ಟೆಗಳನ್ನು ಈಗಾಗಲೇ ಮು.ಮಾ.4 ರಿಂದ 6 ಎಂದು ಗುರುತಿಸಲಾಗಿದೆ. ಅದೇ ದಿನ ಆರೋಪಿಯನ್ನು ವೈದ್ಯಕೀಯ ಪರೀಕ್ಷೆ ಮಾಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

6. ದಿಃ28.12.2018 ರಂದು ಎಸ್ ಕೆ ಆಸ್ಪತ್ರೆಗೆ ಭೇಟಿ ನೀಡಿ ಚಾಸಾ.2 ರವರ ಹೇಳಿಕೆಯನ್ನು ವೈದ್ಯರ ಸಮಕ್ಷಮ ಪಡೆದುಕೊಂಡಿರುತ್ತೇನೆ. ದಿಃ05.01.2019 ರಂದು ಎಸ್ ಕೆ ಆಸ್ಪತ್ರೆಯ ವೈದ್ಯರಿಗೆ ಮನವಿ ಸಲ್ಲಿಸಿ ಚಾಸಾ.2 ರವರ ಗಾಯದ ಪ್ರಮಾಣ ಪತ್ರವನ್ನು ನಿ.ಪಿ.7 ರಂತೆ ಪಡೆದುಕೊಂಡಿರುತ್ತೇನೆ. ದಿಃ28.01.2019 ರಂದು ನ್ಯಾಯಾಂಗ ಬಂಧನದಲ್ಲಿ ಇದ್ದ ಆರೋಪಿಯ ಗುರುತು ಸಂಬಂಧ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿ ಅನುಮತಿ ಪಡೆದುಕೊಂಡಿರುತ್ತೇನೆ. ದಿಃ07.02.2019 ರಂದು ತಹಶೀಲ್ದಾರ್ ಬೆಂಗಳೂರು ಉತ್ತರ ರವರಿಗೆ ಗುರುತು ಕವಾಯತು ನಡೆಸಲು ಮನವಿ ಸಲ್ಲಿಸಿರುತ್ತೇನೆ. ಸದರಿ ಮನವಿಯನ್ನು ನಿ.ಪಿ.16 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.16(ಎ) ಎಂದು ಗುರುತಿಸಲಾಯಿತು. ದಿಃ13.02.2019 ರಂದು ತಹಶೀಲ್ದಾರ್ ಬೆಂಗಳೂರು ಉತ್ತರ ರವರು ನಿ.ಪಿ.3 ರಂತೆ ಗುರುತು ಕವಾಯತನ್ನು ಜೈಲಿನಲ್ಲಿ ನೆರವೇರಿಸಿ ವರದಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತಾರೆ. ದಿಃ23.03.2019 ರಂದು ತನಿಖಾ ಕಾಲದಲ್ಲಿ ಅಮಾನತ್ತುಪಡಿಸಿಕೊಂಡಿದ್ದ ವಸ್ತು ಸಂಖ್ಯೆ 1 ರಿಂದ 8 ಅನ್ನು ಎಫ್.ಎಸ್.ಎಲ್ ವರದಿಗಾಗಿ ಮಡಿವಾಳ, ಎಫ್.ಎಸ್.ಎಲ್ ಪ್ರಯೋಗಾಲಯಕ್ಕೆ ಕಳುಹಿಸಿ ಸ್ವೀಕೃತಿ ಪಡೆದಿರುತ್ತೇನೆ. ಸದರಿ ಸ್ವೀಕೃತಿ ನಿ.ಪಿ.17 ಎಂದು ಗುರುತಿಸಲಾಯಿತು. ದಿಃ30.03.2019 ರಂದು ತನಿಖೆಯನ್ನು ಪೂರೈಸಿ ಆರೋಪ ಸಾಭೀತಾದ್ದರಿಂದ ಎಫ್.ಎಸ್.ಎಲ್ ವರದಿಯನ್ನು ಬಾಕಿ ಇಟ್ಟು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಆರೋಪಿಯನ್ನು ಸಾಕ್ಷಿಯು ನ್ಯಾಯಾಲಯದ ಮುಂದೆ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಸಮಯ ಕೋರಿದ್ದು, ರೂ.1,000/- ವೆಚ್ಚದೊಂದಿಗೆ ಸಮಯ ನೀಡಲಾಯಿತು.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ವಿಜಯ್ ಕುಮಾರ್)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.